**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-173/2018**

ಪಿ.ಡಬ್ಲ್ಯೂಃ-2
ಸಿ.ಡಬ್ಲ್ಯೂಃ- 2

| | | |
|---|---|---|
| ಸಾಕ್ಷಿದಾರರ ಹೆಸರುಃ | : | ವಿಶಾಲಾಕ್ಷಿ |
| ಗಂಡನ ಹೆಸರುಃ | : | ಮಲ್ಲಿಕಾರ್ಜುನ |
| ವಯಸ್ಸುಃ | : | 48 ವರ್ಷ |
| ವೃತ್ತಿಃ | : | ಗೃಹಿಣಿ |
| ವಾಸಃ | : | ಇಬ್ಬಾಣೆ ಗ್ರಾಮ, ಹಾಸನ ತಾಃ. |

**ದಿನಾಂಕಃ 01-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಗಳು ನನಗೆ ಗೊತ್ತು. ಚಾಸಾ-3 ಮಲ್ಲಿಕಾರ್ಜುನ ನನ್ನ ಗಂಡ. ಚಾಸಾ-1 ಪರಮೇಶ ನನ್ನ ಮೈದುನ. ಚಾಸಾ-4 ರವಿ, ಚಾಸಾ-5 ರಾಜಗುಪ್ತ, ಚಾಸಾ-6 ಸುಜಾತ ಗೊತ್ತು. 6ನೇ ಆರೋಪಿ ಪ್ರಭುವಯ್ಯ ನನ್ನ ಅಣ್ಣ. 6ನೇ ಆರೋಪಿ ಪ್ರಭುವಯ್ಯ ಒಂದು ಮನೆ ಹಾಗೂ ಖಾಲಿ ನಿವೇಶನವನ್ನು ನನ್ನ ಯಜಮಾನರಾದ ಮಲ್ಲಿಕಾರ್ಜುನ ರವರು ಖರೀದಿಗೆ ತೆಗೆದುಕೊಂಡಿದ್ದರು. ಮನೆ ನೊಂದಾವಣಿ ಆಗಿತ್ತು. ನಿವೇಶನ ನೊಂದಾವಣಿ ಆಗಿರಲಿಲ್ಲ. ಮನೆಗೆ ಹೊಂದಿಕೊಂಡಂತೆ ಒಂದು ಕಡಿಯಾರ ಇದ್ದು ಅದು ತಮಗೆ ಸೇರಬೇಕು ಎಂದು ನನ್ನ ಅಣ್ಣ ಪ್ರಭುವಯ್ಯ ಆಗಾಗ ನಮ್ಮೊಂದಿಗೆ ಜಗಳ ಆಡುತ್ತಿದ್ದರು.

ಈ ಹಂತದಲ್ಲಿ ಪಿಪಿ ರವರು ಸಾಕ್ಷಿದಾರರ ಮುಂದಿನ ವಿಚಾರಣೆಗೆ ಸಮಯಕೋರಿದ್ದು ನೀಡಲಾಗಿರುತ್ತದೆ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.